

# ಸಣ್ಣ ವ್ಯಾಪಾರಿಗಳನ್ನು ಗುರಿಯಿಡುವ ಅಪಾಯಗಳು

## ಪ್ರವಾದನೆ:

ನಿಮ್ಮ ದೇಶದ ವ್ಯಾಪಾರಿಗಳಿಗಾಗಿಯೂ ಮತ್ತು ವ್ಯಾಪಾರ ಸಂಸ್ಥೆಗಳಿಗಾಗಿಯೂ ಜವಾಬ್ದಾರಿ ಹೊಂದಿಕೊಳ್ಳಿರಿ. ವ್ಯಾಪಾರಿಗಳು ಶಬ್ದಗಳು ಮತ್ತು ಪ್ರತಿಭಟನೆಯು ಶೀಘ್ರದಲ್ಲೇ ನಿಮ್ಮ ರಾಷ್ಟ್ರದಲ್ಲಿ ಕೇಳಿಸಲ್ಪಡುವುದು. ವ್ಯಾಪಾರಿಗಳ ಕಾರಣದಿಂದ ಉಂಟಾಗುವ ವಿವಾದಗಳು ಮತ್ತು ಗೊಂದಲಗಳು ಅಧಿಕವಾಗಿ ನಿಮ್ಮ ದೇಶದ ಮೇಲೆ ಕೇಳಿಸುವುದು. ಒಬ್ಬನು ಅದನ್ನು ಒಳ್ಳೆಯದು ಎಂದು ಹೇಳುವನು ಮತ್ತೊಬನು ಅದನ್ನು ಕೆಟ್ಟದು ಎಂದು ಹೇಳುವನು. ಆದರೆ ನಿಮ್ಮ ದೇಶವು ಕೆಟ್ಟದ್ದನ್ನು ಆಯ್ಕೆಮಾಡಿ ಅದನ್ನು ಒಳ್ಳೆಯದು ಎಂದು ಪರಿಗಣಿಸುವುದು. ತಾನು ಸಾಧಿಸುವುದನ್ನು ಇತರರು ಒಪ್ಪಿಕೊಳ್ಳುವಂತೆ ಒತ್ತಾಯಿಸಲು ಮತ್ತು ಅವರನ್ನು ತಮ್ಮ ಸಿದ್ಧಾಂತಗಳನ್ನು ಪಾಲಿಸುವಂತೆ ಒತ್ತಾಯಿಸುವರು. ಅದು ಆರಂಭದ ಹಂತಗಳಲ್ಲಿ ಒಳ್ಳೆಯದಾಗಿ ಕಾಣಿಸಿಕೊಳ್ಳುವುದು. ನನ್ನ ಜನಗಳಲ್ಲಿ ಕೆಲವರು ಅದನ್ನು ಉತ್ತಮವೆಂದು ಹೇಳಿ ಸ್ವೀಕರಿಸುವರು. ದೇಶದ ಆಡಳಿತಗಾರರ ಸಹಾನುಭೂತಿಯುಳ್ಳ ಮನೋಭಾವದ ಕಾರಣದಿಂದಾಗಿ ಅವರ ಕಾರ್ಯಕ್ರಮಗಳನ್ನು ಬೆಂಬಲಿಸುವಂತವರ ಶಬ್ದಗಳು ಗಟ್ಟಿಯಾಗಿ ಕೇಳಿಸುವುದು. ಸಮೃದ್ಧಿ ಹೆಚ್ಚಾಗುತ್ತದೆ ಮತ್ತು ರಾಷ್ಟ್ರದ ಶಕ್ತಿಯು ಬಲಗೊಳ್ಳುತ್ತದೆ ಎಂದು ಹೇಳುವವರು ತಮ್ಮ ಶಬ್ದಗಳನ್ನು ಬೀದಿಗಳಲ್ಲಿ ಕೇಳಿಸುವಂತೆ ಮಾಡುವರು. ಆದರೆ ಅದು ಒಳ್ಳೆಯದು ಅಲ್ಲ, ದುಷ್ಟವೂ ಅದರಲ್ಲಿ ಅಡಗಿಕೊಂಡಿದೆ. ನನ್ನಿಂದ ಕಣ್ಣುಗಳು ತೆರೆಯಲ್ಪಟ್ಟವನನ್ನು ಹೊರತು ಮತ್ತಾರು ಅದರ ಭವಿಷ್ಯದ ದುಷ್ಟಗಳನ್ನು ಕೊಂಡುಕೊಳ್ಳದಂತೆ ಅದರ ತಂತ್ರಗಳು ಮರೆಯಾಗಿದೆ. ಇದು ಸೈತಾನನ ತಂತ್ರ ಮತ್ತು ಬೇರೆ ಏನೂ ಅಲ್ಲ. (ಬಹಿರಂಗಪಡಿಸಿದೆ ದಿನ: 13.06.2012)

ಒಂದು ದೇಶದ ವ್ಯಾಪಾರವು ಅದು ದೇಶದ ಜೀವರಾಶಿಯಂತದು. ವ್ಯಾಪಾರವನ್ನು ಅಸ್ಥಿರಗೊಳಿಸುವ ಮತ್ತು ದುರ್ಬಲಗೊಳಿಸುವ ಮೂಲಕ ಒಂದು ದೇಶವನ್ನು ಸುಲಭವಾಗಿ ಏಕಸ್ವಾಮ್ಯತೆಗೊಳ್ಳಿಸಿ ಬಿಡಬಹುದು. ಈ ಸತ್ಯದ ಬಗ್ಗೆ ಸೈತಾನನಿಗೆ ತಿಳಿದಿರುವುದರಿಂದ, ಅವರ ಎಲ್ಲಾ ವ್ಯಾಪಾರಿಗಳ ಮತ್ತು ಅವರ ವಹಿವಾಟುಗಳನ್ನು ತನ್ನ ಕೈಗಳಲ್ಲಿ ಇಟ್ಟುಕೊಳ್ಳಲು ಬಯಸುತ್ತಾನೆ. ದೊಡ್ಡ ವೇಶ್ಯೆಯ ಕಾಲಿನ ಕೆಳಗೆ ಭೂಮಿಯ ದೇಶವನ್ನು ಮತ್ತು ವ್ಯಾಪಾರಗಳನ್ನು ಒಪ್ಪಿಸಿ ಕೊಡುವರು ಎಂದು ಸತ್ಯವೇದವು ಮುಂತಿಳಿಸಿದೆ. (ಪ್ರಕಟಣೆ 18:3) ವ್ಯಾಪಾರಿಗಳು ಎಂದು ಹೇಳಿ ಹೇಳ್ಪಾಪಡುವ ವ್ಯಾಪಾರಿಗಳು ನಾವು ದಿನದಿನವೂ ಕಾಣುವ ವ್ಯಾಪಾರಿಗಳು ಅಲ್ಲ. ಎಲ್ಲಾ ವ್ಯಾಪಾರ ಸಂಸ್ಥೆಗಳನ್ನೂ ತಮ್ಮ ನಿಯಂತ್ರಣದಲ್ಲಿ ತರಲು ಮತ್ತು ಸಂಪೂರ್ಣ ಅಧಿಕಾರವನ್ನು ತೆಗೆದುಕೊಳ್ಳುವ ಉದ್ದೇಶ ಹೊಂದಿರುವ ದೊಡ್ಡ ಸಾಂಸ್ಥಿಕ ಕಂಪನಿಗಳನ್ನು ಇಲ್ಲಿ ಇದು ಸೂಚಿಸುತ್ತದೆ. ಇವರ ಕೈಗಳಲ್ಲಿ ಸಂಪೂರ್ಣ ವ್ಯಾಪಾರದ ಅಧಿಕಾರಗಳು ಹೋಗಬೇಕಾದರೆ ಸಣ್ಣ ಸಣ್ಣ ವ್ಯಾಪಾರಿಗಳುರದ್ದುಪಡಿಸಲ್ಪಡಬೇಕು. ಕೇವಲ ಇವರು ಮಾತ್ರ ವ್ಯಾಪಾರದಲ್ಲಿ ವ್ಯವಹಾರವನ್ನು ಮಾಡಬೇಕು. ಇದರಿಂದಾಗಿ ಈಗ ದೇಶದ ಸಣ್ಣ ವ್ಯಾಪಾರಿಗಳು ಮತ್ತು ರೈತರನ್ನು ಹಿಂಸಿಸಲ್ಪಟ್ಟು, ದೊಡ್ಡ ವ್ಯಾಪಾರಗಳ ಕೈಯಲ್ಲಿ ದೇಶದ ಸಂಪೂರ್ಣ ವ್ಯಾಪಾರದ ಅಧಿಕಾರಗಳು ಕೊಂಡೋಗುವ ಕಾರ್ಯಗಳು ನಡೆಯುವುದು ಎಂದು ಕರ್ತನ ಬಹಿರಂಗಪಡಿಸಿದ್ದಾನೆ. ದೇಶದ ಸಣ್ಣ ವ್ಯಾಪಾರಿಗಳು ಮತ್ತು ಮಾರಾಟಗಾರರು ಕಟ್ಟಲ್ಪಡುವಂತೆಯೂ, ಇವರಿಗೆ ವಿರೋಧವಾಗಿ ತೆಗೆದು ಬರುವ ನಿಯಮಗಳು ತಡೆಯಾಗುವಂತೆ ಪ್ರಾರ್ಥಿಸಿರಿ.

### ಪ್ರಾರ್ಥನೆಯ ಅರ್ಜಿಗಳು:

1. ಕೆಲವು ವರುಷಗಳ ಮುಂಚೆ ಬಹಿರಂಗಪಡಿಸಲ್ಪಟ್ಟ ಈ ಮಾತುಗಳು ಈ ದಿನಗಳಲ್ಲಿ ಪೂರ್ಣಗೊಳ್ಳುವದನ್ನು ಕಾಣುತೇವೆ. ರಾಷ್ಟ್ರದೊಳಗೆ ಹೊಸ ವಿತ್ತೀಯ ನೀತಿ ಮತ್ತು ಇತರ ಹಣಕಾಸು ನಿಯಂತ್ರಣ ವ್ಯವಸ್ಥೆಗಳಿಂದಾಗಿ, ಅಂತಹ ಜನರ ಜೀವನದಲ್ಲಿ ಪರಿಣಾಮ ಬೀರಿದೆ. ಇವರು ಬಿಡಿಸಲ್ಪಡುವಂತೆ ಪ್ರಾರ್ಥಿಸಿರಿ.
2. ಕಾರ್ಪೊರೇಟ್ ಕಂಪನಿಗಳ ಕೈಗಳಿಗೆ ದೇಶದ ಸಂಪೂರ್ಣ ವ್ಯಾಪಾರಗಳು ಹೋಗದಂತೆ, ಅದಕ್ಕಾಗಿ ತೆಗೆಯಲ್ಪಡುವ ರೀತಿಯ ತಂತ್ರದ ಆಲೋಚನೆಗಳು ಮತ್ತು ಪ್ರಯತ್ನಗಳು ತಡೆಯಲ್ಪಡುವಂತೆ ಪ್ರಾರ್ಥಿಸಿರಿ.
3. ಸಣ್ಣ ವ್ಯಾಪಾರಿಗಳಿಗೆ ಬೆದರಿಕೆಗಳನ್ನು ಒಡ್ಡುವ ಹೊಸ ತೆರಿಗೆ ವ್ಯವಸ್ಥೆಯನ್ನು ಹಿಂತೆಗೆದುಕೊಳ್ಳಬೇಕು ಮತ್ತು ವ್ಯಾಪಾರಿಗಳ ಜೀವನದ ಮೇಲೆ ಪರಿಣಾಮ ಬೀರುವ ಯಾವುದೇ ನೀತಿಯನ್ನು ಸರಕಾರ ತರಬಾರದೆಂದು ಪ್ರಾರ್ಥಿಸಿರಿ.
4. ಪ್ರಸ್ತುತ ಸಣ್ಣ ವ್ಯವಹಾರಗಳನ್ನು ಸ್ವಾಧೀನಪಡಿಸಿಕೊಳ್ಳುವುದು ಮತ್ತು ದೊಡ್ಡ ಸಾಂಸ್ಥಿಕ ಕಂಪನಿಗಳ ಕೈಗೆ ಅವರನ್ನು ಒಪ್ಪಿಸುವಂತದು ಪ್ರಪಂಚದ ಹಲವಾರು ಸ್ಥಳಗಳಲ್ಲಿ ನಡಯುತಿದೆ. ಇದನ್ನು ಮಾಡುವ ಮೂಲಕ, ದೊಡ್ಡ ಸಾಂಸ್ಥಿಕ ಕಂಪನಿಗಳು ವ್ಯಾಪಾರ ಮತ್ತು ವಾಣಿಜ್ಯವನ್ನು ಜಾಗತೀಕರಣಗೊಳಿಸಲು ಉದ್ದೇಶಿಸಿವೆ. ಇಂಥ ಎಲ್ಲಾ ಉದ್ದೇಶಗಳು ಹಾಳಾಗುವಂತೆ ಪ್ರಾರ್ಥಿಸಿರಿ.
5. ಕಾರ್ಪೊರೇಟ್ ಕಂಪನಿಗಳು ಶೀಘ್ರವಾಗಿ ಜಾಗತಿಕತೆಯನ್ನು ಜಾಗತೀಕರಣಗೊಳಿಸುತ್ತಿದ್ದರೂ ಸಹ, 'ಬೆಲೆಥ್' ಎಂದು ಕರೆಯಲ್ಪಡುವ ದುಷ್ಟ ಆತ್ಮದ ಕಾರ್ಯಗಳು ರಹಸ್ಯವಾಗಿ ಅಡಗಿರುವುದನ್ನು ಕರ್ತನು ಬಹಿರಂಗಪಡಿಸಿದ್ದಾರೆ. ಈ ದುಷ್ಟ ಆತ್ಮವು ಬಂಧಿಸಲ್ಪಡುವಂತೆ ಪ್ರಾರ್ಥಿಸಿರಿ.